

ಮುಖದ ಮೇಲೆ ಢಾಳಾಗಿ ಎದ್ದು ಕಾಣುವವು.

ಪಕ್ಕದಲ್ಲೇ ಇದ್ದ ಟೀ ಸ್ಟಾಲ್‌ನತ್ತ ಮುಖ ಮಾಡಿದಳು. 'ಅಗೋ, ರಾಗಿಣಿ' ಎಂದು ಅವಳ ನಿರೀಕ್ಷೆಯಲ್ಲೇ ಇದ್ದ ಏಳೆಂಟು ಯುವಕರ ಗುಂಪು ಸಂಭ್ರಮಿಸಿ ಅವಳನ್ನು ಎದುರುಗೊಂಡರು. 'ಅಕ್ಕಾ... ಟೀ' ಎಂದು ಯುವಕನೊಬ್ಬ ಚಹಾಕಪ್ಪಿನ ಜೊತೆಗೆ ಬನ್ ತಂದುಕೊಟ್ಟ. ಬನ್ ಮೆಲ್ಲುತ್ತಾ, ಟೀ ಹೀರುತ್ತಾ ಎಲ್ಲರನ್ನೂ ಪ್ರಜ್ಞಾಪೂರ್ವಕವಾಗಿ ನೋಡಿದಳು. ಎಲ್ಲರ ಮುಖದಲ್ಲೂ ಆತಂಕದ ಛಾಯೆ ಎದ್ದು ಕಾಣುತ್ತಿತ್ತು. ಬಹುಶಃ ರಾಗಿಣಿ ಬರುವುದಿಲ್ಲವೆಂದು ಅವರೆಲ್ಲ ಭಾವಿಸಿದ್ದರೇನೊ? ಈಗವಳು ಬಂದದ್ದು ಎಲ್ಲರಿಗೂ ಖುಷಿ ತಂದಿತ್ತು.

'ಅಕ್ಕ ಹೋಗೋಣವೇ ರಿಹರ್ಸಲ್ ಶೆಡ್ಡಿಗೆ (ತಾಲೀಮು ಕೊಠಡಿ)' ಎಂದು ಕರೆದರು. ರಾಗಿಣಿ ಕಲಾಕ್ಷೇತ್ರದ ಕಡೆಗೆ ಹೋಗುವ ಗೇಟಿನ ಕಡೆಗೆ ನೋಡಿದಳು. ದಿನಾಲೂ ಅಲ್ಲೇ ಇರುತ್ತಿದ್ದ ಮುದುಕಿ ಇಂದು ಕಾಣಲಿಲ್ಲ. ಟೌನ್ ಹಾಲ್ ಕಡೆ ನೋಡಿದಾಗ ಪಾವಟಿಗೆಯ ದೊಡ್ಡದಾದ ಕುಂಡದ ಮರೆಯಲ್ಲಿ ಪೊಲೀಸರಿಗೆ ಕಣ್ಣು ತಪ್ಪಿಸಿ ಮುದುಕಿ ಪಾವಟಿಗೆಗೆ ತಲೆ ಆನಿಸಿ ಮಲಗಿದ್ದಳು.

ಸರಸರನೆ ಆ ಮುದುಕಿ ಹತ್ತಿರ ಬಂದಳು. ಬ್ಯಾಗಿನಲ್ಲಿದ್ದ ಬನ್ ಅನ್ನು ಅವಳ ಅಲ್ಯೂಮಿನಿಯಂ ತಟ್ಟೆಯೊಳಗೆ ಇಟ್ಟಳು. ಆ ಶಬ್ದಕ್ಕೆ ಕಣ್ಣು ಬಿಟ್ಟ ಮುದುಕಿ ತನ್ನ ನಿಸ್ತೇಜ ಕಣ್ಣುಗಳಿಂದೊಮ್ಮೆ ರಾಗಿಣಿಯನ್ನು ದಿಟ್ಟಿಸಿ ನೋಡಿದಳು.

ಅಲ್ಲಿಂದ ಎಲ್ಲರೂ ರಿಹರ್ಸಲ್ ಶೆಡ್ಡಿಗೆ ಬಂದರು. 'ಬೆಳಕಿನ ಕೂಸು' ಸಾಮಾಜಿಕ ನಾಟಕದ ಬಗ್ಗೆ ನಿರ್ದೇಶಕ ವೆಂಕಟರಾಜು ನಾಟಕದ ಹಿನ್ನೆಲೆ, ನಟನೆ, ಪರಿಣಾಮವನ್ನು ವಿವರಿಸಿದ. ಪಾತ್ರಗಳ ಹಂಚಿಕೆಯ ನಂತರ ಅವರವರ ಪಾತ್ರದ ಡೈಲಾಗ್ ಓದುವುದು, ಮತ್ತೆ ಮತ್ತೆ ಓದುವುದು ಮುಂದುವರೆದಿತ್ತು.

***

ಸಂಜೆ ಆರರ ಸಮಯ. ರಾಗಿಣಿ ಸಂಸ ಬಯಲು ರಂಗದ ಮೆಟ್ಟಿಲುಗಳನ್ನು ಹತ್ತುತ್ತಿದ್ದಳು. 'ಕುರುಕ್ಷೇತ್ರ' ನಾಟಕ ಶುರುವಾಗಲು ಇನ್ನೂ ಸಮಯವಿತ್ತು. ಮೂಲೆಯಲ್ಲಿ ಬಂದು ಕುಳಿತು ರಂಗಸಜ್ಜಿಕೆ ರೆಡಿ ಮಾಡುವವರ ಕಡೆಗೆ ಗಮನ ಹರಿಸಿದಳು. ಅಷ್ಟರಲ್ಲಿ ವೆಂಕಟರಾಜು ಬಂದು ಅವಳ ಪಕ್ಕದಲ್ಲಿ ಕುಳಿತ. ಅವನನ್ನು ನೋಡಿ ಸಿಡಿಮಿಡಿಗೊಂಡಳು.

'ಇಂದು ಏಕಿಷ್ಟು ಕೆಂಡ ಕಾರುವೆ? ನಿನ್ನ ಮುಖ ನೋಡಿದರೆ ಬಿರು ಬಿಸಿಲಿಗೆ ಕಾದ ಟಾರು ರಸ್ತೆಯಂತೆ ಬುರುಬುರು ಉರಿಯುತ್ತಿದೆಯಲ್ಲ...!' ಎಂದು ನಾಟಕೀಯವಾಗಿ ಹೇಳಿದ. ಸುಮ್ಮನಿದ್ದಳು. 'ನನ್ನ ಮಾತಿನಿಂದ ಬೇಸರವಾಯಿತೆ?' ಎಂದು ಮತ್ತೆ ಕೆಣಕಿದ. 'ಮೌನವೇತಕೆ... ಬಾಯಿಂದ ಮುತ್ತುಗಳು ಉದುರಲಿ' ಎಂದು ತಮಾಷೆ ಮಾಡಿದ. ಅದಕ್ಕೂ ಅವಳು ಜಗ್ಗಲಿಲ್ಲ. ಮೌನ ಮುರಿಯಲಿಲ್ಲ.

ಈಗ ವೆಂಕಟರಾಜು ತನ್ನ ವರಸೆಯನ್ನು ಬದಲಾಯಿಸಿದ. ವಾಸ್ತವ ಜಗತ್ತಿಗೆ ಬಂದು ಗಂಭೀರನಾದ. 'ರಾಗಿಣಿ... ನಿನ್ಗೆ ಗೊತ್ತಾ...! ನಿನ್ನ ಮೇಲೆ ನಾನೆಷ್ಟು ಆಸೆಯನ್ನಿಟ್ಟುಕೊಂಡಿದ್ದೀನಿ ಅಂತ. ನನ್ನ ಆಸೆಯನ್ನು ನಿನಗೆ ಹೇಗೆ ಮನದಟ್ಟು ಮಾಡಿ ತೋರಿಸಲಿ? ನಾನು ಆಂಜನೇಯನಲ್ಲ, ಎದೆ ಬಗೆದು ತೋರಿಸಲು...!' ಎಂದು ಭಾವುಕನಾಗಿ ಹೇಳಿದ. ಆಗವಳು ಮತ್ತೂ ಮಹಾ ಮೌನಿಯಾದಳು. ಮತ್ತೆ ವೆಂಕಟರಾಜು, 'ರಾಗಿಣಿ... ನಿನ್ನ ಆ ವೇದನೆ, ಸಂಕಟ, ರೋಗಿಷ್ಟ ಗಂಡ, ಅವನ ಕಠೋರ ಮಾತು... ಇಂಥ ಪರಿಸ್ಥಿತಿಯಲ್ಲೂ ಯಾರಿಗೂ ಅಂಜದೆ ಬದುಕಿನೊಡನೆ ಹೋರಾಟ ಮಾಡುತ್ತಿರುವುದು ಯಾತಕ್ಕಾಗಿ? ಇದೆಲ್ಲಾ ಯಾರಿಗಾಗಿ? ಈಗಲೂ ನೀನು ಹೂಂ ಎನ್ನು, ನಿನಗೆ ಬಾಳು ಕೊಡೋಕೂ ನಾನು ಸಿದ್ಧ. ಆಮೇಲೆ ನೋಡುತ್ತಾ ಇರು. ನಿನ್ನ ಸಿನಿಮಾ ತಾರೆ ಮಾಡ್ತೀನಿ. ರಾಗಿಣಿ... ರಾಗಿಣಿ... ಎಂದು ನಿರ್ಮಾಪಕರು ನೀನಿದ್ದಲ್ಲಿಗೆ ಬಂದು ಕ್ಯೂನಲ್ಲಿ ನಿಲ್ಲುವಂತೆ ಮಾಡ್ತೀನಿ. ನೀನು ದೊಡ್ಡ ಮನಸ್ಸು ಮಾಡ್ಬೇಕು ಅಷ್ಟೇ. ನರಕದಲ್ಲಿ ಬಾಳುತ್ತಿರುವ ಈ ಬಾಳಿಗೆ ತಿಲಾಂಜಲಿ ಕೊಡು. ಅಂಧಕಾರದಿಂದ ಹೊರಗೆ ಬಾ... ಜಗತ್ತು ವಿಶಾಲವಾಗಿದೆ. ಅಲ್ಲಿ ಸ್ವಚ್ಛಂದವಾಗಿ ಬಾನಲ್ಲಿ ಹಕ್ಕಿಗಳಂತೆ ಹಾರೋಣ. ನೀನೀಗ ಮೌನವನ್ನ ಮುರಿ...' ವೆಂಕಟರಾಜು ಉದ್ವೇಗದಿಂದ ಹೇಳುತ್ತಿದ್ದಂತೆ ದಿಗ್ಗಂತ ಕತ್ತಲನ್ನ ಸರಿಸಿ ಲೈಟಿನ ಬೆಳಕು ಹರಿಯಿತು. ಎಲ್ಲಾ ಕಡೆ ಜಗಮಗಿಸುವ ಬೆಳಕು.

ರಾಗಿಣಿ ಎದ್ದಳು. ವೆಂಕಟರಾಜು ಮಾತಿಗೆ ಏನೂ ಪ್ರತಿಕ್ರಿಯಿಸಲಿಲ್ಲ. ಮೆಟ್ಟಿಲುಗಳಿಂದ ದೊಡ್ಡ ಹೆಜ್ಜೆಗಳಲ್ಲಿ ಇಳಿಯುತ್ತಿದ್ದಳು. ಸಂಸ ಬಯಲು ರಂಗಮಂದಿರದೊಳಗಿನ 'ಗ್ರೀನ್ ರೂಂ'ಗೆ ಬಂದಳು. ಅಂದಿನ ನಾಟಕದ ಕಥಾ ನಾಯಕಿಯ ಮೇಕಪ್ ಮತ್ತು ಪೋಷಾಕು ಧರಿಸಿಕೊಳ್ಳಲು ಮುಂದಾದಳು. ಕ್ಷಣಾರ್ಧದಲ್ಲೇ ಪಾವಟಿಗೆಯ ಮೇಲೆಲ್ಲಾ ರಂಗಾಸಕ್ತರು ಬಂದು ಕುಳಿತರು. ಇತ್ತ ಕಡೆ ರಂಗದ ಮೇಲೆ ಬೆಳಕು ಹರಿಯಿತು. ಸುತ್ತೆಲ್ಲ ಕತ್ತಲೋ ಕತ್ತಲು. ತುಂಬಿದ ಸಭೆಯೊಳಗೆ ದ್ರೌಪದಿಯ ಸೀರೆಯನ್ನು ದುಶ್ಯಾಸನ ಅಬ್ಬರಿಸಿ ಬೊಬ್ಬಿರಿಸಿ ಸೆಳೆಯುವನು. ಆಗ ವಿಧಿಯಿಲ್ಲದೆ ದ್ರೌಪದಿ ಕೃಷ್ಣನ ಮೊರೆ ಹೋದಳು. ಕೃಷ್ಣ ಅವಳು ಪಡುತ್ತಿರುವ ಸಂಕಟವನ್ನು ನೋಡಿ ಅಕ್ಷಯಸೀರೆಯನ್ನು ಧಾರೆಯಾಗಿ ಕರುಣಿಸಿದ. ಅವಳ ಮಾನ ಉಳಿಯಿತು. ಸೀರೆಯನ್ನು ಸೆಳೆಯಲಾಗದೆ ದುಶ್ಯಾಸನ ಸೋತು ವಿಷಣ್ಣನಾದ.

ದ್ರೌಪದಿಯ ಅಮೋಘ ಅಭಿನಯಕ್ಕೆ ಪ್ರೇಕ್ಷಕರಿಂದ ಕರತಾಡನ ಮೊಳಗಿತು. ಮುಂದಿನ ಅಂಕದಲ್ಲಿ ಭೀಮ–ದುರ್ಯೋಧನರ ಕಾಳಗ. ದುರ್ಯೋಧನ ಬಲಶಾಲಿ. ಆದರವನು ಕೃಷ್ಣನ ಬಲೆಗೆ ಸಿಲುಕಿದ. 'ದುರ್ಯೋಧನನ ಪ್ರಾಣವಿರುವುದು ಅವನ ತೊಡೆಯಲ್ಲಿ. ತೊಡೆಗೆ ಬಲವಾಗಿ ಹೊಡೆ' ಎಂದು ಭೀಮನಿಗೆ ಕೃಷ್ಣ ಹೇಳಿದ. ಅದರಂತೆ ತೊಡೆಗೆ ಹೊಡೆದ. ದುರ್ಯೋಧನ ನೆಲಕ್ಕುರುಳಿದ. ಅವರ ಕಾದಾಟದ ಅಭಿನಯ ಕಣ್ಣಿಗೆ ಕಟ್ಟಿದಂತಿತ್ತು. ಜಯಕಾರ ಮೊಳಗಿತು.

ನಾಟಕ ಮುಗಿಯುವಷ್ಟರಲ್ಲಿ ರಾತ್ರಿ ಹತ್ತು ಗಂಟೆಯಾಗಿತ್ತು. ರಾಗಿಣಿಗೆ ಬೆಳಗ್ಗೆಯಿಂದ ಬಿಡುವಿಲ್ಲದ ಕೆಲಸ. ಒತ್ತಡದಿಂದ ಸುಸ್ತಾಗಿದ್ದಳು.

ಪೋಷಾಕು ಬಿಚ್ಚಿಟ್ಟು ಮೇಕಪ್‌ನಲ್ಲೇ ಮನೆಗೆ ಹೋಗಲು ಹೊರಟು ನಿಂತಳು. ಆಟೋದಲ್ಲೇ ವೆಂಕಟರಾಜು ಅವಳನ್ನ ಮನೆಗೆ ಬಿಟ್ಟಿದ್ದ.

ರಾಗಿಣಿ ಮಹಡಿಯನ್ನು ಹತ್ತಿ ಬೀಗ ತೆಗೆದು ಬಾಗಿಲನ್ನು ನೂಕಿದಳು. ಗಪ್ಪೆಂದು ಗಬ್ಬು ವಾಸನೆ ಮುಖಕ್ಕೆ ರಾಚಿತು. ಮೂಗು ಮುಚ್ಚಿಕೊಂಡಳು. ಶಿವಸ್ವಾಮಿ ಮಂಚದ ಮೇಲಿಂದ ಕೆಳಕ್ಕೆ ಬಿದ್ದಿದ್ದ. ಮಲಮೂತ್ರ ಮಾಡಿಕೊಂಡಿದ್ದ. 'ಇಷ್ಹೊತ್ತು ಯಾರ ಜೊತೆ...' ಅವನ ಸ್ಥಿತಿಗಿಂತಲೂ ಮಾತುಗಳೇ ಹೆಚ್ಚು ಅಸಹ್ಯ ಎನಿಸಿದವು.

ಕುಹಕದ ಮಾತುಗಳು ಕಿವಿಯೊಳಗೆ ಭೋರ್ಗರೆಯುತ್ತಿದ್ದರೂ ಮೌನಿಯಾಗಿ ವ್ಯಾನಿಟಿ ಬ್ಯಾಗನ್ನ ಮಂಚದ ಮೇಲಿಟ್ಟಳು. ಅವನ ಹೊಲಸು ಕೈ, ಹೊಲಸು ಮಾತು ಕೇಳಿಸಿಕೊಳ್ಳುತ್ತಾ, ನಿಧಾನವಾಗಿ ಬಚ್ಚಲ ಮನೆಗೆ ಕರೆತಂದಳು. ನಿರ್ಭಾವುಕತೆಯಿಂದ ಅವನ ಬಟ್ಟೆ ಕಳಚಿ ತೊಳೆಯತೊಡಗಿದಳು.

ಶುಚಿಯಾದ ಅವನಿಗೆ ಬಟ್ಟೆ ತೊಡಿಸಿ ಮಂಚದ ಮೇಲೆ ಕೂರಿಸಿದಳು. ನೆಲದ ಮೇಲಿದ್ದ ಗಲೀಜನ್ನು ಬಾಚಿ ಹಾಕಿ, ನೀರಿನಿಂದ ತೊಳೆದಳು.

ಮುಖಕ್ಕೆ ಕೈಗೆ ಹಚ್ಚಿದ್ದ ಬಣ್ಣ ಹಾಗೆಯೇ ಇತ್ತು. ಬಣ್ಣ ತೆಗೆದು ಬಚ್ಚಲಿಗಿಳಿದಳು. ನೀರು ತುಂಬಿದ ಬಿಂದಿಗೆಯನ್ನು ಎತ್ತಿ ತಲೆಯ ಮೇಲೆ ಸುರುವಿಕೊಂಡಳು. ಮೈ–ಮನಸ್ಸು ತಣ್ಣಗಾಗುವ ತನಕ ಅದೆಷ್ಟು ಸಾರಿ ನೀರು ಸುರಿದುಕೊಂಡಳೋ...

ಅಡುಗೆ ಮನೆಗೆ ಬಂದು ತಟ್ಟೆಯಲ್ಲಿ ಅನ್ನ ಸಾರು ಕಲಸಿ ಅವನ ಮುಂದಿಟ್ಟಳು. ಅವನಿಗೆ ಹಸಿವಿತ್ತು. ಹಸಿವು ಯಾರನ್ನೂ ಕೇಳುವುದಿಲ್ಲ, ಕಾಯುವುದಿಲ್ಲ. ಹಸಿವಿನ ಮುಂದೆ ಎಲ್ಲವೂ ಗೌಣ. ಶಿವಸ್ವಾಮಿ ಗಬಗಬಾಂತ ಒಂದೇ ಉಸಿರಿಗೆ ತಿಂದ. 'ಇವತ್ತು ತರಲಿಲ್ವಾ...?' ಅಂತ ಬಾಯಿ ಬಿಟ್ಟ. ರಾಗಿಣಿಗೆ ಸಿಟ್ಟು ಬಂತು. ಬ್ಯಾಗಿನಿಂದ ಕ್ಯಾಡ್ ಬರೀಸ್ ತೆಗೆದು ಅವನ ಮುಂದೆ ಹಾಕಿದಳು. 'ನೀನು ಎಷ್ಟು ಒಳ್ಳೆಯವಳು ಗೊತ್ತಾ...?' ಎಂದು ಜೊಲ್ಲುಸುರಿಸುತ್ತ ಚಾಕೊಲೇಟ್ ತೆಗೆದುಕೊಂಡ. ಅಷ್ಟೇ ಆನಂದದಿಂದ ಬಾಯಿಗೆ ತುರುಕಿಕೊಂಡ. ಸ್ವಲ್ಪ ಹೊತ್ತಿನಲ್ಲೇ ದಿಂಬಿಗೆ ತಲೆ ಕೊಟ್ಟ.

ಸುಣ್ಣದ ಕಲ್ಲುಗಳನ್ನು ಉಡಿಯಲ್ಲಿ ಕಟ್ಟಿಕೊಂಡು ನೀರಿನಲ್ಲಿ ಮುಳುಗಿದ ಪರಿಸ್ಥಿತಿ ತನ್ನದಾದಂತೆ ರಾಗಿಣಿಗೆ ಭಾಸವಾಯಿತು. ಅವಳಿಗೆ ವೆಂಕಟರಾಜು ನೆನಪಾದ. ಅವನ ಮಾತುಗಳು ನೆನಪಾದವು. ಕಿಟಕಿಯ ಹೊರಗೆ ಬಿದಿಗೆಯ ಚಂದ್ರ. ಒಳಗೆ, ಕೊರಡಿನಂತಹ ಶಿವಸ್ವಾಮಿ. ರಾಗಿಣಿ ಚಂದ್ರನನ್ನು, ಬೆಳದಿಂಗಳನ್ನು ನೋಡತೊಡಗಿದಳು.